ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ-9/ಲಾಟರಿ/ಮನೆ/ನಿವೇಶನ/2019-20 ದಿನಾಂಕ: 30-07-2019.

# ಸಾರ್ವಜನಿಕ ಪ್ರಕಟಣೆ.

ಕರ್ನಾಟಕ ಗೃಹ ಮಂಡಳಿಯು ಬೀದರ್ ಜಿಲ್ಲೆ, ಗುನ್ನಳ್ಳಿ ಗ್ರಾಮದ ಸ.ನಂ.8/1, 9 ಮತ್ತು 10/2 ರಲ್ಲಿ ಒಟ್ಟು 49 ಎಕರೆ 39 ಗುಂಟೆ ಜಮೀನಿನಲ್ಲಿ ವಿವಿಧ ವರ್ಗದ ಮನೆಗಳು/ನಿವೇಶನಗಳನ್ನು ಅಭಿವೃದ್ಧಿಪಡಿಸಿ, ಸಾರ್ವಜನಿಕರಿಗೆ ಈಗಾಗಲೇ ಹಂಚಿಕೆ ಮಾಡಲಾಗಿದೆ. ಈ ಪೈಕಿ ಕೆಲವು ಮನೆ/ನಿವೇಶನಗಳು ಖಾಲಿ ಉಳಿದಿದ್ದು, ಖಾಲಿ ಉಳಿದಿರುವ ಮನೆ/ನಿವೇಶನಗಳನ್ನು ಪ್ರಸ್ತುತ ಹಂಚಿಕೆ ಮಾಡಲು ಉದ್ದೇಶಿಸಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಸ್ಥಳ ಮತ್ತು ಜಿಲ್ಲೆ | ವರ್ಗ | ಬಾಕಿ ಉಳಿದಿರುವ ಸ್ವತ್ತುಗಳ ಸಂಖ್ಯೆ | | ನೋಂದಣಿ ಶುಲ್ಕ (ರೂ.ಗಳಲ್ಲಿ) | ಆರಂಭಿಕ ಠೇವಣಿ (ರೂ.ಗಳಲ್ಲಿ) | ಬಾಕಿ ಉಳಿದಿರುವ ಸ್ವತ್ತುಗಳ ಸಂಖ್ಯೆ | |
|---|---|---|---|---|---|---|---|---|
| | | | ನಿವೇಶನಗಳು | ಮನೆಗಳು | | | ಮನೆಗಳು (ರೂ.ಗಳಲ್ಲಿ) | ನಿವೇಶನಗಳು (ಪ್ರತಿ ಚದರಡಿಗೆ ರೂ.ಗಳಲ್ಲಿ) |
| 1. | ಬೀದರ್ ಜಿಲ್ಲೆ, ಗುನ್ನಳ್ಳಿ ಗ್ರಾಮದ ಸ.ನಂ.8/1,9 ಮತ್ತು 10/2 | EWS | 12 | 0 | 300/- | 10000/- | - | 125/- |
| | | LIG | 69 | 19 | 500/- | 20,000 | 12,00,000/- | 250/- |
| | | MIG | 111 | 08 | 1000/- | 30,000 | 13,50,000/- | |
| | | HIG-1 | 52 | - | 15000/- | 40,000 | - | |
| | | ಒಟ್ಟು | 244 | 27 | | | | |

## ಹಂಚಿಕೆಯ ನಿಯಮ, ಷರತ್ತು ಮತ್ತು ನಿಬಂಧನೆಗಳ ವಿವರಗಳು

• ಅರ್ಜಿ ಸಲ್ಲಿಸುವವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ಬೀದರ್ ಇವರನ್ನು ಖುದ್ದಾಗಿ ಸಂಪರ್ಕಿಸಿ, ನಿಗಧಿತ ಅರ್ಜಿ ಶುಲ್ಕ ಪಾವತಿಸಿ ಅರ್ಜಿ ಪಡೆದು, ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು (Housing Commissioner, KHB, Bangalore) ಇವರ ಹೆಸರಿನಲ್ಲಿ ಚಲನ್/ಡಿ.ಡಿ ಪಡೆದು ಭರ್ತಿಮಾಡಿದ ಅರ್ಜಿಗಳನ್ನು ಕೊನೆಯ ದಿನಾಂಕದೊಳಗೆ ಬೀದರ್ ಕಛೇರಿಯಲ್ಲಿಯೇ ಸಲ್ಲಿಸುವುದು. ಅಥವಾ ಅಂತರ್ಜಾಲದಲ್ಲಿ ತಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಿದ ವಿವರಗಳನ್ನು ಪರಿಶೀಲಿಸಿದ ನಂತರ ಮೇಲೆ ತಿಳಿಸಿರುವಂತೆ ಆರಂಭಿಕ ಠೇವಣಿ ಹಣವನ್ನು ಮಂಡಳಿಯ ವೆಬ್‌ಸೈಟ್ (www.karnatakahousing.com)ನಲ್ಲಿ online ಮೂಲಕ ಚಲನ್ ಪಡೆದು, ಈ ಕೆಳಗೆ ತಿಳಿಸಿರುವ ಬ್ಯಾಂಕ್‌ನಲ್ಲಿ ಪಾವತಿ ಮಾಡಬಹುದು ಅಥವಾ e-payment ಮುಖಾಂತರವೂ ಸಹ ಪಾವತಿಸಬಹುದು.

| Sl.No. | Name of the Bank & Branch | Account No. | IFSC NO. |
|---|---|---|---|
| 1. | AXIS BANK,SUPER MARKET BRANCH,KALABURGI | 915010023254516 | UTIB0000342 |

• ಆರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25-10-2019 ಆಗಿರುತ್ತದೆ. ಕೊನೆಯ ದಿನಾಂಕದ ನಂತರ ಬರುವ ಅರ್ಜಿದಾರರ ಅರ್ಜಿಗಳನ್ನು ಹಂಚಿಕೆಗೆ ಪರಿಗಣಿಸಲಾಗುವುದಿಲ್ಲ.

• ಮನೆ/ನಿವೇಶನಗಳನ್ನು ಹೇಗಿದೆಯೋ ಹಾಗೆ (AS IS WHERE IS BASIS) ಹಾಗೂ ಪೂರ್ಣ ಬೆಲೆ ಮಾರಾಟ (Outright Sale Basis) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.

• EWS, LIG, MIG ಮತ್ತು HIG ವರ್ಗದಲ್ಲಿ ಈಗಾಗಲೇ ನೋಂದಣಿ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿರುವ ಅರ್ಜಿದಾರರುಗಳು ಆರಂಭಿಕ ಠೇವಣಿ ಮೊತ್ತವನ್ನು ಪಾವತಿಸಿ, ಮಂಡಳಿಗೆ ದಾಖಲೆಗಳನ್ನು ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಹಂಚಿಕೆಗೆ ಪರಿಗಣಿಸಲಾಗುವುದು.

• ಸದರಿ ಬಡಾವಣೆಯಲ್ಲಿ ಈಗಾಗಲೇ ಮನೆ/ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಿದ್ದು, ಪ್ರಸ್ತುತ ಉಳಿದಿರುವ ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸುತ್ತಿರುವುದರಿಂದ, ಹಂಚಿಕೆಯನ್ನು ಯಾವುದೇ ಪ್ರವರ್ಗಗಳಡಿಯಲ್ಲಿ ಮೀಸಲಾತಿಯನ್ವಯ ಕಾಯ್ದಿರಿಸದೇ ಬರುವ ಎಲ್ಲಾ ಅರ್ಜಿಗಳನ್ನು ಒಟ್ಟಿಗೆ ಸೇರಿಸಿ ಲಾಟರಿ ಮೂಲಕ ಹಂಚಿಕೆ ಮಾಡಲಾಗುವುದು.

• ಮನೆ/ನಿವೇಶನಗಳು ಹಂಚಿಕೆಯಾಗದೆ ಇರುವ ಅರ್ಜಿದಾರರಿಗೆ ಅರ್ಜಿಯ ಜೊತೆ ಪಾವತಿಸಿರುವ ಮುಂಗಡ ಹಣವನ್ನು ಯಾವುದೇ ಬಡ್ಡಿ ನೀಡದೇ ಪೂರ್ಣ ಮರುಪಾವತಿ ಮಾಡಲಾಗುವುದು. ನೋಂದಣಿ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ. ಹಾಗೂ ಹಂಚಿಕೆ ನಂತರ ರದ್ದತಿಯಾದಲ್ಲಿ ಆರಂಭಿಕ ಠೇವಣಿಯಲ್ಲಿ ಶೇಕಡ 25 ರಷ್ಟು ಹಣವನ್ನು ಮುರಿದುಕೊಂಡು ಬಾಕಿ ಮೊತ್ತವನ್ನು ಮರುಪಾವತಿ ಮಾಡಲಾಗುವುದು.

• ಕರ್ನಾಟಕ ಗೃಹ ಮಂಡಳಿಯಿಂದಾಗಲೀ ಅಥವಾ ಇನ್ನಿತರೆ ಯಾವುದೇ ಪ್ರಾಧಿಕಾರದಿಂದಾಗಲೀ ಅರ್ಜಿದಾರರ ಹೆಸರಿನಲ್ಲಿ ಹಾಗೂ ಅರ್ಜಿದಾರರ ಪತಿ ಅಥವಾ ಪತ್ನಿ ಹೆಸರಿನಲ್ಲಿ ಹಾಗೂ ಅಪ್ರಾಪ್ತ ವಯಸ್ಸಿನ ಮಕ್ಕಳ ಹೆಸರಿನಲ್ಲಿ ಮನೆ/ನಿವೇಶನ ಪಡೆದಿರುವುದಿಲ್ಲವೆಂದು ಹಾಗೂ ಅರ್ಜಿ ಸಲ್ಲಿಸುವ ಅರ್ಜಿದಾರರುಗಳು ಅರ್ಜಿ ಸಲ್ಲಿಸುವುದಕ್ಕೆ ಮುನ್ನ 10 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಕರ್ನಾಟಕ ರಾಜ್ಯದ ನಿವಾಸಿಯಾಗಿರುವ ಬಗ್ಗೆ ನೋಟರಿ ಮೂಲಕ ಪ್ರಮಾಣೀಕರಿಸಿದ ಪ್ರಮಾಣಪತ್ರ (AFFIDAVIT) ಸಲ್ಲಿಸುವುದು.

• ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಬಂಧನೆಗಳು 1983ರ ಹಂಚಿಕೆ ನಿಯಮ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

• ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೀದರ್ ಇವರ ಮೊ. ನಂ. 9483521444, ಸಹಾಯಕ ಕಂದಾಯ ಅಧಿಕಾರಿ, ಕಗೃಮಂ, ಬೀದರ್ ಇವರ ಮೊ. ನಂ. 9482687609, ಜಿಲ್ಲಾ ಯೋಜನಾ ಕಛೇರಿ, ಕಗೃಮಂ, ಬೀದರ್, ದೂರವಾಣಿ ಸಂಖ್ಯೆ: 08482-232365, ಉಪ ಪ್ರಧಾನ ವ್ಯವಸ್ಥಾಪಕರು ಮತ್ತು ಕಂದಾಯ ಅಧಿಕಾರಿ-1 ಇವರನ್ನು ಖುದ್ದಾಗಿ ಅಥವಾ ದೂರವಾಣಿ ಮೂಲಕ ದೂ.ಸಂಖ್ಯೆ: 080-22273511 ext. 307/309/335/347 ರಲ್ಲಿ ಸಂಪರ್ಕಿಸಬಹುದು. ಹಾಗೂ ಮಂಡಳಿಯ ವೆಬ್‌ಸೈಟ್ (www.karnatakahousing.com) ಯಿಂದ ಮಾಹಿತಿ ಪಡೆಯಬಹುದು.

ಸಹಿ/-

ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.